ಮಂದಿಯನ್ನು ನೇಮಕ ಮಾಡಲು ಮೊನ್ನೆ ಕ್ಯಾಬಿನೇಟ್ ಒಪ್ಪಿಗೆ ಕೊಟ್ಟಿದೆ. ಈ ಜಿಲ್ಲೆಯಲ್ಲಿರುವ ಎಲ್ಲಾ ಆರೋಗ್ಯ ಆಸ್ಪತ್ರೆಗಳಿಗೆ ಸಾಕಷ್ಟು ವೈದ್ಯರುಗಳ ಕೊರತೆ ಇದೆ. ಘನ ಸರ್ಕಾರದ ಮುಖ್ಯಮಂತ್ರಿಯವರು ಏನು 5 ಸಾವಿರ ಹುದ್ದೆಗಳನ್ನು ತುಂಬಲು ಅನುಮತಿ ಕೊಟ್ಟಿದ್ದಾರೆ ಇನ್ನೂ 5 ಸಾವಿರ ಮಂದಿಯ ನೇಮಕಾತಿಗೆ ಅನುಮತಿ ಕೊಟ್ಟರೆ ಎಲ್ಲಾ ಸಾರ್ವಜನಿಕ ಆಸ್ಪತ್ರೆಯ ಸಿಬ್ಬಂದಿಯ ಕೊರತೆಯನ್ನು ಪೂರೈಸಲು ಸಾಧ್ಯವಾಗುತ್ತದೆ. ತಾವೇನು ವೈದ್ಯರ ಕೊರತೆಯ ಬಗ್ಗೆ ಕೇಳಿದ್ದೀರಿ ಕೇವಲ ಒಂದೂವರೆ ತಿಂಗಳಿನಲ್ಲಿ ಅದನ್ನು ಮಾಡಿಕೊಡುವುದಾಗಿ ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

<u>ಚಿಂತಾಮಣಿ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರಿಲ್ಲದೆ ಇರುವುದು.</u>

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**125(348)**
ಸದಸ್ಯರ ಹೆಸರು	:	**ಶ್ರೀ ಡಾ: ಸುಧಾಕರ್.ಎಂ.ಸಿ. (ಚಿಂತಾಮಣಿ)**
ಉತ್ತರಿಸುವ ಸಚಿವರು	:	**ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**

ಅ) ಚಿಂತಾಮಣಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೈವಾರವು ಯಾತ್ರಾ ಸ್ಥಳವಾಗಿದ್ದು, ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಸದರಿ ಆಸ್ಪತ್ರೆಗೆ 3 ಹುದ್ದೆಗಳು ಮಂಜೂರಾಗಿದ್ದು, 3 ಹುದ್ದೆಗಳು ಭರ್ತಿಯಾಗಿರುತ್ತದೆ. ಆದರೆ ಒಬ್ಬರು ಕಾರ್ಯ ನಿರ್ವಹಿಸುತ್ತಿರುತಾರೆ. ಇಲ್ಲಿಂದ ಬೇರೆ ಕಡೆಗೆ ಇಬ್ಬರು ವೈದ್ಯಾಧಿಕಾರಿಗಳನ್ನು ತಾತ್ಕಾಲಿಕವಾಗಿ ನಿಯೋಜಿಸಲಾಗಿದೆ. ಈ ನಿಯೋಜನೆ ಆದೇಶವನ್ನು ರದ್ದು ಪಡಿಸಲಾಗಿದ್ದು ವೈದ್ಯರನ್ನು ಕೈವಾರದಲ್ಲಿ ಕರ್ತವ್ಯ ನಿರ್ವಹಿಸಲು ಸೂಚಿಸಲಾಗಿದೆ.

ಆ) ಈ ಸ್ಥಳಕ್ಕೆ ಯಾತ್ರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ವೈದ್ಯಕೀಯ ಸೌಲಭ್ಯಗಳನ್ನು ಹೆಚ್ಚಿಸಲು ಈ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ:

ಈ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಇ) ಹಾಗಿದ್ದಲ್ಲಿ, ಈ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದೇ?

ಉದ್ಭವಿಸುವುದಿಲ್ಲ.

ಡಾ. ಎಂ.ಸಿ. ಸುಧಾಕರ್: ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಮೂರು ಹುದ್ದೆಗಳಲ್ಲಿ ಒಬ್ಬರು ವೈದ್ಯರಿದ್ದಾರೆ. ಇನ್ನೂ ಇಬ್ಬರನ್ನು ಬೇರೆಡೆಗೆ ನಿಯೋಜಿಸಲಾಗಿತ್ತು. ಆ ನಿಯೋಜನೆಯನ್ನು ರದ್ದು ಮಾಡಿದ್ದೇವೆ ಎಂದು ಉತ್ತರದಲ್ಲಿ ಒದಗಿಸಿದ್ದಾರೆ. ಮುಖ್ಯವಾದ ವಿಚಾರ, ಕೈವಾರ ಎನ್ನತಕ್ಕದ್ದು ಒಂದು ದೊಡ್ಡ ಯಾತ್ರಾ ಸ್ಥಳ. ಸಾವಿರಾರು ಜನ ಅಲ್ಲಿ ವಾಸವಾಗಿದ್ದಾರೆ. ಸುತ್ತಮುತ್ತಲು ಗ್ರಾಮಗಳಿಂದ ಜನರು ಸೇರಿದರೆ ಸುಮಾರು 15–20 ಸಾವಿರ ಜನರಿಗೆ ಅಲ್ಲಿ ವೈದ್ಯಕೀಯ ಸೌಲಭ್ಯವನ್ನು ಒದಗಿಸಿಕೊಡತಕ್ಕ ವ್ಯವಸ್ಥೆ ಇದೆ. ಇಲ್ಲಿ ಸುಮಾರು ಒಂದು ವರ್ಷದಿಂದ ಗುತ್ತಿಗೆ ಆಧಾರದ ಮೇಲೆ ಒಬ್ಬರು ಡಾ: ರವಿ ಎಂದು ವೈದ್ಯರು ಇದ್ದರು. ಅವರು ಬೆಳಿಗ್ಗೆಯೇ ಕುಡಿಯಲು ಪ್ರಾರಂಭ ಮಾಡುತ್ತಾರೆ. ಅವರು ಯಾವುದೇ ರೀತಿಯಾಗಿ ಸೌಲಭ್ಯವನ್ನು ಒದಗಿಸುತ್ತಿಲ್ಲ, ಅವರನ್ನು ಬೇರೆ ಕಡೆಗೆ ವರ್ಗಾಯಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ಹೇಳಿದಾಗ ಅವರನ್ನು ವರ್ಗಾಹಿಸದೆ ಬೇರೆ ಭಾಗಕ್ಕೆ ನಿಯೋಜನೆ ಮಾಡಿದ್ದಾರೆ. ಇನ್ನೊಬ್ಬ ಮಹಿಳಾ ವೈದ್ಯರು ಬೆಂಗಳೂರಿನ ಕೆ.ಆರ್.ಪುರಂಗೆ ನಿಯೋಜನೆಯ ಮೇರೆಗೆ ಬಂದಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ವಿನಂತಿಸುವುದೇನೆಂದರೆ ಒಬ್ಬ ವೈದ್ಯ ಅಲ್ಲಿ ಕುಡುಕನಾಗಿದ್ದು ಅವನನ್ನು ತೆಗೆಯಿರಿ ಎಂದು ಹೇಳಿದರೆ ಗುತ್ತಿಗೆ ಆಧಾರದ ಮೇಲಿರುವ ಅವರ ಗುತ್ತಿಗೆಯನ್ನು ರದ್ದುಪಡಿಸಬೇಕಾಗಿತ್ತು. ಆದರೆ, ಆ ಕೆಲಸವನ್ನು ಮಾಡದೆ ಅವರನ್ನು ಬೇರೆ ಭಾಗಕ್ಕೆ ವರ್ಗಾಯಿಸಿದ್ದರೆ. ಕುಡುಕರನ್ನು ಬೇರೆ ಕಡೆ ಹಾಕಿದರೆ ಅವರು ಕುಡಿಯುವುದನ್ನು ಬಿಡುತ್ತಾರೆಯೇ? ಅಲ್ಲಿ ಪೋಸ್ಟ್ ಖಾಲಿಯಾದ ಮೇಲೆ ಬೇರೆಯವರನ್ನು ನೇಮಕ ಮಾಡಬಹುದಿತ್ತು. ಅದಕ್ಕೂ ಅವಕಾಶ ಕೊಟ್ಟಿಲ್ಲ. ಕೆ.ಆರ್. ಪುರಂಗೆ ಬಂದಿರುವ ಮಹಿಳಾ ವೈದ್ಯರಿಗೆ ಅಲ್ಲಿ ಇಷ್ಟ ಇಲ್ಲ ಎಂದರೆ ದಯವಿಟ್ಟು ಅವರನ್ನು ಕೆ.ಆರ್.ಪುರಂಗೇ ಕೊಟ್ಟುಬಿಡಿ. ನಮಗೆ ಅಲ್ಲಿರುವ ಪೋಸ್ಟನ್ನು ಖಾಲಿ ಮಾಡಿಸಿಕೊಡಿ. ಅಲ್ಲಿಗೆ ಸರ್ಕಾರದಿಂದ ನೇರವಾಗಿ ಭರ್ತಿ ಮಾಡಿ ಇಲ್ಲದಿದ್ದರೆ ಜಿಲ್ಲಾಧಿಕಾರಿಗಳ ಮೂಲಕ ಭರ್ತಿ ಮಾಡುವ ವ್ಯವಸ್ಥೆಯನ್ನು ಈ ಎರಡು ಹುದ್ದೆಗಳಿಗೆ ಮಾಡಬೇಕೆಂದು ಸಚಿವರಲ್ಲಿ ವಿನಂತಿಸುತ್ತೇನೆ. ಮತ್ತೊಂದು, ಸಮುದಾಯ ಆರೋಗ್ಯ ಕೇಂದ್ರವಾಗಿ ಇದನ್ನು ಮೇಲ್ದರ್ಜೆಗೆ ಏರಿಸಬೇಕೆಂದು ನಮ್ಮ ಬೇಡಿಕೆ ಇದೆ. ಏಕೆಂದರೆ,

ಅಲ್ಲಿ ಸುಮಾರು 20 ಸಾವಿರ ಜನರಿದ್ದಾರೆ. 3 ವೈದ್ಯರು ಇದ್ದಾರೆ. ಅಲ್ಲಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಬೇಕಾದ ಎಲ್ಲಾ ಸೌಲಭ್ಯಗಳು ಇದೆ. ಕಟ್ಟಡ, ಸ್ಥಳ ಎಲ್ಲವೂ ಇದೆ. ಆದ್ದರಿಂದ ದಯವಿಟ್ಟು ಅದನ್ನು ಈ ವರ್ಷದಲ್ಲಿ ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೆ ಏರಿಸುವ ಬಗ್ಗೆ ನಿರ್ದಿಷ್ಟವಾಗಿ ಹೇಳಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಬಿ. ಶ್ರೀರಾಮುಲು: ವೈದ್ಯರ ಬಗ್ಗೆ ಅವರೇನು ತಿಳಿಸಿದರು ಅದರ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳುತ್ತೇನೆ. ನಿನ್ನೆ ಸಹ ತಾವು ಇದಕ್ಕೆ ಸಂಬಂಧಿಸಿದಂತೆ ಪತ್ರವನ್ನು ಕೊಟ್ಟಿದ್ದೀರಿ. ಕೈವಾರ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ಇದೆ. ಜೊತೆಗೆ ಏನೇನು ಮಾಡಬೇಕು ಎಂಬ ಬಗ್ಗೆ ಪತ್ರವನ್ನು ಕೊಟ್ಟಿದ್ದೀರಿ. ಅಧಿಕಾರಿಗಳ ಜೊತೆ ನಾನು ಮಾತನಾಡಿದ್ದೇನೆ. ಇನ್ನೊಂದು ವಾರದಲ್ಲಿ ಇದನ್ನು ಸರಿಪಡಿಸುತ್ತೇನೆ. ಸಮುದಾಯ ಆರೋಗ್ಯ ಕೇಂದ್ರದ ಬಗ್ಗೆ ಪ್ರಸ್ತಾವನೆ ಬಂದಿಲ್ಲ.ಆ ದಷ್ಟು ಬೇಗ ಅದಕ್ಕೆ ಯಾವ ರೀತಿಯಾಗಿ ವ್ಯವಸ್ಥೆ ಮಾಡಬೇಕೊ ಅದನ್ನು ಮಾಡಲು ಪ್ರಯತ್ನ ಮಾಡುತ್ತೇನೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ವೈದ್ಯರನ್ನು ಖಾಯಂಗೊಳಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	126(521)
ಸದಸ್ಯರ ಹೆಸರು	:	ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ)
ಉತ್ತರಿಸುವ ದಿನಾಂಕ	:	31-07-2008
ಉತ್ತರಿಸುವ ಸಚಿವರು	:	ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಸರ್ಕಾರಿ ಆಸ್ಪತ್ರೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ವೈದ್ಯರನ್ನು ಖಾಯಂಗೊಳಿಸಲು ಸರ್ಕಾರಕ್ಕಿರುವ ತೊಂದರೆಗಳೇನು:

ಶ್ರೀಮತಿ ಉಮಾದೇವಿ ಎಂಬುವವರ ಪ್ರಕರಣದಲ್ಲಿ ಭಾರತ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಪ್ರಕಾರ ಯಾವುದೇ ಹುದ್ದೆಯನ್ನು ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರವೇ ತುಂಬಬೇಕಾಗುತ್ತದೆ. ಅದರಂತೆ ಗುತ್ತಿಗೆ ವೈದ್ಯಧಿಕಾರಿಗಳ ಸೇವೆಯನ್ನು ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ.